**ದಿನಾಂಕ: 21.03.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 2 ಮತ್ತು 13 ನೇ ಪ್ರತಿವಾದಿ ಪರ ಶ್ರೀ.ಸಿ ಪಿ ಜೆ ವಕೀಲರಿಂದ :**

ನನ್ನ ಅಜ್ಜನ ಹೆಸರು ಶಿವಪುತ್ರಪ್ಪ ಬಸಪ್ಪ ಸತ್ಯಪ್ಪನವರ ಆಗಿರುತ್ತದೆ ನನ್ನ ಅಜ್ಜನಿಗೆ ಒಟ್ಟು ಜನ ಮಕ್ಕಳುಗಳು ಇದ್ದರು. ನನ್ನ ಅಜ್ಜ ಮತ್ತು ಆತನ 5 ಜನ ಮಕ್ಕಳುಗಳ ನಡುವೆ 1993 ರಂದು ವಾಟ್ನಿ ಆಗಿತ್ತು ಎಂದರೆ ಸರಿ. ಆ ವಾಟ್ನಿಯಂತೆ ಅವರ ಅವರ ಹಿಸ್ಸೆಗ ಬಂದ ಆಸ್ತಿಗಳಲ್ಲಿ ಅವರುಗಳೆ ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಆ ವಾಟ್ನಿ ಪ್ರಕಾರ ಸರ್ವೆ ನಂಬರ 175/2 ರ 4 ಎಕರೆ 03 ಗುಂಟೆ ಆಸ್ತಿ ನನ್ನ ಅಜ್ಜನ ಹಿಸ್ಸೆಗೆ ಉಳಿಸಿಕೊಂಡಿದ್ದು ಅವರು ಮೃತ ಪಟ್ಟ ನಂತರ ವಾದಿಯ ಹಿಸ್ಸೆಗೆ ಹೋಗುವಂತೆ ಮಾತುಕತೆ ಆಗಿತ್ತು ಎಂದರೆ ಸರಿ. ಅದರಂತೆ ಆ ಆಸ್ತಿಯಲ್ಲಿ ನನ್ನ ಅಜ್ಜ ಮತ್ತು ವಾದಿಯೇ ವಹಿವಾಟು ಮಾಡುತ್ತಾ ಬಂದಿರುತ್ತಾರೆ. ಆ ಆಸ್ತಿಯನ್ನು ನನ್ನ ಅಜ್ಜ ಬದುಕಿದ್ದಾಗಲೇ ಆತ ಮತ್ತು ವಾದಿಯೇ ಕೂಡಿಯೇ ಬೇರೆ ಆಸ್ತಿಯನ್ನು ಖರೀಸುವ ಸಂಬಂಧವಾಗಿ ಆ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಆ ಕ್ರಯ ಪತ್ರಕ್ಕೆ ನನ್ನ ಅಜ್ಜ ಮತ್ತು ವಾದಿ ಕೂಡಿಯೆಜುೀ ಸಹಿ ಮಾಡಿರುತ್ತಾರೆ ಎಂದರೆ ಸರಿ. ಈ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಶಿವಮೊಗ್ಗದದಲ್ಲಿರುವ ಕೆ ಆರ್ ಪುರಂ ನಗರದಲ್ಲಿ ಒಂದು ಮನೆಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ನನನ್ನ ಅಜ್ಜ ಮೃತ ಪಟ್ಟ ನಂತರ ಶಿಮೊಗ್ಗದಲ್ಲಿರುವ ಮನೆ ನನ್ನ ಅಜ್ಜನಿಂದ ವಾದಿಯಹೆಸರಿಗೆ ದಾಖಲೇ ಆಗಿರುತ್ತದೆ. 1993 ರಂದು ಆದ ವಾಟ್ನಿ ಪ್ರಕಾರ ಅವರ ಅವರ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಅವರುಗಳೇ ಸ್ವಾಧೀನ ಹೊಂದಿ ಅಭಿವೃದ್ದಿ ಪಡಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ.

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd**/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ